ಬೇತಮಂಗಲ ಕೆರೆ ಕ.ನ.ನೀ.ಸ. ಮತ್ತು ಒಳಚರಂಡಿಯ ಮಂಡಲಿಯ ನಿರ್ವಹಣ ವ್ಯಾಪ್ತಿ.

350 (728) ಶ್ರೀ ಎಂ. ಭಕ್ತವತ್ಸಲಂ (ಕೆ.ಜಿ.ಎಫ್):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೇತಮಂಗಲ ಕೆರೆಯು ಕನನೀಸ ಮತ್ತು ಒಚ ಮಂಡಲಿಯ ನಿರ್ವಹಣೆಯಲ್ಲಿದೆಯೆ?

2) ಬೇತಮಂಗಲ ಕೆರೆಯ ನೀರು ಕೆ.ಜಿ.ಎಫ್.ನಲ್ಲಿ ವಾಸವಾಗಿರುವ ಜನರ ಗೃಹ ಬಳಕೆಗೆ ಮಾತ್ರ ಮೀಸಲಾಗಿದೆಯೆ?

3) ಕೆ.ಜಿ.ಎಫ್.ನಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

4) ಬೇತಮಂಗಲ ಕೆರೆಯ ನೀರು ನೀರಾವರಿಗೋಸ್ಕರ 150 ಸ್ವಂತ ತೆರೆದ ಬಾವಿಗಳ ಮೂಲಕ ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

5) ಈ ರೀತಿ ಬೇತಮಂಗಲ ಕೆರೆಯ ನೀರು ಪೋಲಾಗುವುದನ್ನು ತಡೆಗಟ್ಟಲಾಗುವುದೇ ಹಾಗಾದರೆ ಯಾವಾಗ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

1) ಹೌದು

2) ಇಲ್ಲ

ಹಾಗೂ ಈ ಕೆರೆಯ ನೀರನ್ನು ಬಿ.ಜಿ.ಎಂ.ಎಲ್.ಮತ್ತು ಬಿ.ಇ.ಎಂ.ಎಲ್.ಕಾರ್ಖಾನೆಗಳಿಗೆ ಸಗಟು ಪ್ರಮಾಣದಲ್ಲಿಯೂ ಮತ್ತು ಬೇತಮಂಗಲ ಹಳ್ಳಿಯ ಜನರಿಗೆ ಸರಬರಾಜು ಮಾಡಲಾಗುತ್ತಿದೆ.

3) ಇಲ್ಲ

ಬೇತಮಂಗಲ ಕೆರೆಯಲ್ಲಿ ಸಾಕಷ್ಟು ನೀರಿದ್ದು ಈ ಕೆರೆಯಿಂದಲೂ ಮತ್ತು ಕೊಳವೆ ಬಾವಿಗಳಿಂದಲೂ ಒಟ್ಟು ದಿನಂಪ್ರತಿ 4.92 ದಶಲಕ್ಷ ಲೀಟರ್ ನೀರನ್ನು ದಿನಂಪ್ರತಿ ತಲಾ 72 ಲೀಟರ್‌ನಂತೆ ಸರಬರಾಜು ಮಾಡಲಾಗುತ್ತಿದೆ.

4) ಇಲ್ಲ.

5) ಉದ್ಭವಿಸುವುದಿಲ್ಲ.

ರಾಮನಗರದ ಗೃಹ ಮಂಡಳಿಯ ನಿವೇಶನಗಳು.

352 9405) ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಗೃಹ ಮಂಡಳಿಯ ಕಾಲೋನಿಯಲ್ಲಿ ಗೃಹ ಮಂಡಳಿಗೆ ಸೇರಿದ ಖಾಲಿ ನಿವೇಶನಗಳಿವೆಯೇ?

ಆ) ಇದ್ದರೆ ಅವುಗಳನ್ನು ಸಾರ್ವಜನಿಕರಿಗೆ ನೀಡುವ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೆ?

ಇ) ಈ ಖಾಲಿ ನಿವೇಶನಗಳ ಸಂಖ್ಯೆ ಹಾಗೂ ವಿಸ್ತೀರ್ಣ ಎಷ್ಟು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲ್ಲ.

ಬೆಂಗಳೂರು ನಗರದ ನಿವೇಶನ ರಹಿತರು ನಿವೇಶನಕ್ಕಾಗಿ ನಗರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ.

354 (402) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ನಿವೇಶನ ರಹಿತರು ನಿವೇಶನಕ್ಕಾಗಿ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):-

ಉ) 86,988

ಬಾರ್ ಮತ್ತು ರೊಸ್ಟೋರೆಂಟ್‌ಅನ್ನು ತೆರೆಯಲು ಅನುಮತಿ ನಿರಾಕರಿಸುವುದರ ಬಗ್ಗೆ

356 (700) ಶ್ರೀ ಎಚ್.ಎಂ. ರೇವಣ್ಣ (ಮಾಗಡಿ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಉತ್ತರ ತಾಲ್ಲೂಕು ಕಸಬಾ ಹೋಬಳಿ, ಚೋಳನಾಯಕನ ಹಳ್ಳಿಯ ಅಯ್ಯಪ್ಪ ದೇವಸ್ಥಾನ ಹರಿಜನ ಕಾಲೋನಿಯಲ್ಲಿರುವ ಬಾರ್ ಮತ್ತು ರೆಸ್ಟೋರೆಂಟ್ ನಡೆಸಲು ಲೈಸನ್ಸ್ ನೀಡದಾಗ್ಯೂ ಬೆಂಗಳೂರು ಜಿಲ್ಲಾಧಿಕಾರಿಗಳು ಪರವಾನಗಿ ನೀಡಿರುವುದು ನಿಜವೇ?

ಆ) ಈ ವಿಷಯಲ್ಲಿ ಗ್ರಾಮಸ್ಥರು ಜಿಲ್ಲಾಧಿಕಾರಿಗಳಿಗೆ ದೂರುಗಳನ್ನು ಸಲ್ಲಿಸಿರುವರೇ?

ಇ) ಹಾಗಿದ್ದಲ್ಲಿ, ದೂರಿನ ಬಗ್ಗೆ ಕೈಗೊಂಡ ಕ್ರಮಗಳೇನು?

ಈ) ಮೇಲ್ಕಂಡ ಸ್ಥಳದಲ್ಲಿ ಬಾರ್, ವೈನ್ ಷಾಪ್ ಮುಂತಾದವುಗಳನ್ನು ತೆರೆಯದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು.):-

ಅ) ಇಲ್ಲ.

ಆ) ಹೌದು.

ಇ) ಈ ಬಗ್ಗೆ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.

ಈ) ಆಕ್ಷೇಪಣಾ ಸ್ಥಳವಾದ ಪಕ್ಷದಲ್ಲಿ ಪರವಾನಗಿ ಮಂಜೂರು ಮಾಡದಿರಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಕೆ.ಆರ್. ನಗರ ಪಟ್ಟಣಕ್ಕೆ ಒಳಚರಂಡಿ ಯೋಜನೆ ಮಂಜೂರಾತಿ.

357 (933) ಶ್ರೀ ಹೆಚ್. ವಿಶ್ವನಾಥ್ (ಕೆ.ಆರ್. ನಗರ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

1. ಕೃಷ್ಣರಾಜ ನಗರ ಟೌನ್‌ಗೆ ಒಳಚರಂಡಿ ಯೋಜನೆಯ ಮಂಜೂರಾತಿಗಾಗಿ ನಕ್ಷೆ, ಅಂದಾಜು ವೆಚ್ಚ ತಯಾರಿಸಲಾಗಿದೆಯೇ?